# ಮಕ್ಕಳಿಗಾಗಿ ಬೈಬಲ್
ಅರ್ಪಿಸುವ



## ರಾಜಕುಮಾರನು
## ಕುರಿ
## ಕಾಯುವವನಾದನು

ಬರಹಗಾರರು: Edward Hughes
ಚಿತ್ರಲೇಖಕರು: M. Maillot; Lazarus
ಅಳವಡಿಸುವವರು: E. Frischbutter; Sarah S.
ಪದ್ಮಾ ಸೈಲೇಸ್: Vinay Shirol
ತಯಾರಕರು: Bible for Children
www.M1914.org

BFC
PO Box 3
Winnipeg, MB R3C 2G1
Canada

©2015 Bible for Children, Inc.
ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು. ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.



ಒಂದು ದಿನ ಮೋಶೆ ಐಗುಪ್ತದ ಒಬ್ಬನು ಇಬ್ರಿಯ ಆಳನ್ನು ಹೊಡೆಯುವುದನ್ನು ನೋಡಿದನು. ಮೋಶೆ ಪರೋಹನ ಅರಮನೆಯಲ್ಲಿಯೇ ಬೆಳೆದು ಅಲ್ಲೆ ವಿಧ್ಯೆಯನ್ನು ಕಲಿತಿದ್ದನು. ಮತ್ತು ಆತನೂ ಸಹ ಇಬ್ರಿಯನಾಗಿದ್ದರಿಂದ ಆಳಿಗೆ ಸಹಾಯ ಮಾಡಿದನು.

ಯಾರು ತನ್ನನ್ನ ನೋಡುತ್ತಿಲ್ಲ ಎಂದು ತಿಳಿದುಕೊಂಡು ಮೋಶೆ ಆ ಕನಿಕರ ವಿಲ್ಲದ ಆಳಿನ ಮೇಲೆ ಬಿದ್ದನು. ಹೊಡೆದಾಟದಲ್ಲಿ ಮೋಶೆ ಐಗುಪ್ತದವನನ್ನೆ ಕೊಂದು ಮರಳಿನಲ್ಲಿ ಹುತುಹಾಕಿದನು.



ಮೂರನೆ ದಿವಸ ಮೋಶೆ ಇಬ್ರಿಯರು ಹೊಡೆದಾಡುವುದನ್ನು ಕಂಡು ಅವರನ್ನು ಶಾಂತಗೊಳಿಸಲು ಪ್ರಯತ್ನಿಸಿದನು. ಆಗ ಅವರಲ್ಲಿ ಒಬ್ಬನು "ನೀನು ಆ ಐಗುಪ್ತನನ್ನು ಕೊಂದಹಾಗೆ ನನ್ನನ್ನು ಕೊಲ್ಲುವೆಯಾ?" ಎಂದು ಕೇಳಿದಾಗ ಮೋಶೆ ಹೇದರಿದನು ಮೋಶೆ ನೀನ್ನ ಕೊಂದ ಸುದ್ದಿಯು ಪರೋಹನಿಗೂ ಮತ್ತು ಜನರಿಗೂ ತಿಳಿದಿತ್ತು. ಹೀಗಾಗಿ ಮೋಶೆ ಅಲ್ಲಿಂದ ಓಡಿಹೋಗಿ ಮಿದ್ಯಾನ್ ದೇಶ ಸೇರಿದನು.



ಒಂದು ಬಾವಿ ಹತ್ತಿರ ಕುತುಕೊಂಡಿರಲು, ವಿದ್ಯಾನ್ಯರ ಆಚಾರ್ಯನ ಏಳು ಹೆಣ್ಣುಮಕ್ಕಳು ಬಂದು ತಂದೆಯ ಕುರಿಗಳಿಗೆ ನೀರು ಸೇದುತ್ತಿದ್ದರು.



ಬೇರೆ ಕುರಿಕಾಯುವ ಜನರು ಆ ಹೆಣ್ಣುಮಕ್ಕಳನ್ನು ದೂರ ಸರಿಸಲು ಪ್ರಯತ್ನಿಸಿದಾಗ ಮೋಶೆ ಅವರಿಂದ ಕಾಪಾಡಿದನು.





“ನೀವು ಈ ಹೊತ್ತು ಬೇಗ ಮನೆಗೆ ಬಂದಿರಿ”, ಹೆಣ್ಣುಮಕ್ಕಳ ತಂದೆಯಾದ ರಗೋವೇಲನು ಉದ್ಗರಿಸಿದನು, ಹೆಣ್ಣುಮಕ್ಕಳು ನಡೆದ ಸಂಗತಿಯನ್ನು ತಿಳಿಸಲು ಅವನು “ಆ ಮನುಷ್ಯನನ್ನು ಇಲ್ಲಿ ಕರದುಕೊಂಡು ಬನ್ನಿ ಎಂದು ಹೇಳಿದನು, ಇತ್ರೋ ಎಂತಲೂ ಕರೆಯಲ್ಪಡುವ ರಗೋವೇಲನ ಸಂಗಡ

ಮೋಶೆ ವಾಸಮಾಡುತ್ತಾ ಅವನ ಹಿರಿ ಮಗಳನ್ನು ಮದುವೆಯಾದನು.

ಐಗುಪ್ತದಲ್ಲಿ ಪರೋಹನು
ಸತ್ತು ಹೋಗಿರಲಾಗಿ, ದೇವರ
ಮಕ್ಕಳಾದ ಇಬ್ರಿಯರು ಇನ್ನೂ ಬಿಟ್ಟಿ
ಕೆಲಸಮಾಡುತ್ತಿದ್ದರು. ಎಷ್ಟೋ ಬಾದೆ
ಕಷ್ಟಗಳನ್ನು



ಅನುಭವಿಸಿ ದೇವರ
ಸಹಾಯಕ್ಕಾಗಿ ಮೋರೆಯಿಡಲು,
ದೇವರು ಅವರ ಕೂಗನ್ನು ಕೇಳಿದನು.

ಬಿಟ್ಟಿ ಕೆಲಸದಲ್ಲಿ ತೊಡಗಿದ್ದ ಇಬ್ರಿಯ ಜನರನ್ನು ಬಿಡಿಸಲು ದೇವರು ಮೋಶೆಯಿಂದ ಬಿಡಿಸಬೇಕೆಂಬ ಯೋಜನೆಯು ಮೋಶೆಗೆ ತಿಳಿದಿರಲಲ್ಲ. ಮೋಶೆ ಐಗುಪ್ತ ದೇಶವನ್ನು ಬಿಟ್ಟು ೪೦ ವರ್ಷಗಳು ಉರಳಿ ಹೊಗಿದ್ದವು. ರೆಗೋವೇಲನ ಕುರಿ ಕಾಯುವ ಕೆಲಸದಲ್ಲಿದ್ದನು,



ಒಂದು ವೇಳೆ ಐಗುಪ್ತದಲ್ಲಿದ್ದ ತನ್ನ ಜನರನ್ನು ನೆನಪಿಸಿಕೊಂಡಿರಬಹುದು.

ಒಂದು ದಿವಸ ಮೋಸೆ ಒಂದು ಮುಳ್ಳಿನ ಪೊದೆ ಉರಿಯುದನ್ನು ನೋಡಿದನು. ಆದರೆ ಆ ಪೊದೆಯು ಬೆಂಕಿಯಿಂದ ಉರಿಯುತ್ತಿದ್ದರು ಅದು ಸುಟ್ಟುಹೋಗಿರಲಿಲ್ಲ. ಆಗ ಅದಕ್ಕೆ ಏನು ಕಾರಣವೆಂದು ತಿಳಿದುಕೊಳ್ಳಲು ನಿರ್ದರಿಸಿದನು.



ಮೋಶೆ ಹತ್ತಿರಕ್ಕೆ ಬಂದಾಗ, ದೇವರು ಅವನನ್ನು ಉರಿಯುವ ಪೊದೆಯಿಂದ ಕರೆದಾಗ ಅದಕ್ಕವನು "ಇಗೋ ಇದ್ದೇನೆ ಅನ್ನಲು ಅದಕ್ಕೆ ದೇವರು ನೀನು ಹತ್ತಿರ ಬರಬೇಡ, ನೀನ್ನ ಕಾಲಿನ ಕೆರಗಳನ್ನು ತೆಗೆದುಹಾಕು, ನೀನು ನಿಂತಿರುವ ಸ್ಥಳವು ಪರಿಶುದ್ಧವಾದದ್ದು" ಎಂದು ಹೇಳಿದನು.



“ನನ್ನ ಜನರನ್ನು ಪರೋಹನಿಂದ ಬಿಡಿಸಲು ನೀನನ್ನು ಐಗುಪ್ತಕ್ಕೆ ಕಳುಹಿಸುವೆನು” ಎಂದು ದೇವರು ಹೇಳಿದನು. ಆದರೆ ಮೋಶೆ ಅಲ್ಲಿಗೆ ಹೋಗಲು ಹೇದರಿದನು.



ಆಗ ದೇವರು ಆತನ ಅದ್ಭುತ ಶಕ್ತಿಯನ್ನು ತೋರಿಸಲು ಮೋಶೆಯ ಕೈಯಲ್ಲಿದ್ದ ಕೋಲನ್ನು ಹಾವಾಗುವಂತೆ ಮಾಡಿದನು.



ಮೋಶೆ ಹಾವಿನ ಬಾಲನ್ನೆ ಹಿಡಿಯುತ್ತಲೆ ಅದು ಮತ್ತೆ ಕೋಲಾಯಿತು.
ದೇವರು ಮತ್ತೊಂದು ಗುರುತನ್ನು ಕೊಟ್ಟನು.



“ನೀನ್ನ ಕೈಯನ್ನು ಉಡಿಯಲ್ಲಿ ಇಟ್ಟಕೋ” ಎಂದು ದೇವರು ಆಜ್ಞಾಪಿಸಿಲು, ಮೋಶೆ ಹಾಗೆ ಮಾಡಿದಾಗ ಅವನ ಕೈಗೆ ತೊನ್ನು ಹತ್ತಿ ಹಿಮದಂತೆ ಬೆಳ್ಳಗಾಗಿತ್ತು.



ಮತ್ತು ಅದೇ ರೀತಿ ಉಡಿಯಲ್ಲಿ ಇಟ್ಟುಕೊಂಡಾಗ ಅವನ ಕೈ ಗುಣವಾಯಿತು.



ಮೋಶೆ ಇನ್ನು ಆಕ್ಷೇಪಿಸಿ “ನನಗೆ ಚೆನ್ನಾಗಿ ಮಾತನಾಡಲು ಬರುವುದಿಲ್ಲ” ಎಂದು ದೇವರಿಗೆ ಹೇಳಿದಾಗ, ದೇವರು ಕೋಪಗೊಂಡನು. “ನಾನು ನಿನ್ನ ಅಣ್ಣನಾಗಿರುವ ಆರೋನನನ್ನು ಮಾತನಾಡಲು ಉಪಯೋಗಿಸುವೆನು, ಅವನಿಗೆ ಹೇಳು” ಎಂದು ದೇವರು ಉತ್ತರಕೊಟ್ಟನು.



ಮೋಶೆ ಇತ್ರೋನ ಬಳಿಗೆ ಹಿಂದಿರುಗಿ
ತನ್ನ ವಸ್ತುಗಳನ್ನು ತೆಗೆದುಕೊಂಡು
ಐಗುಪ್ತಿಗೆ ಹೋರಟನು.



ದೇವರು ಮೋಶೆಯ ಅಣ್ಣನಾಗಿರುವ ಆರೋನನ್ನ ಮೋಶೆಯ ಬಳಿಗೆ ಬೆಟ್ಟಕ್ಕೆ ಎದುರುಗೊಳ್ಳಲು ನಡೆಸಲು, ಇಬ್ರಿಯ ಜನರನ್ನು ಐಗುಪ್ತದಿಂದ ಬಿಡಿಸಬೇಕೆಂಬ ದೇವರ ಯೋಜನೆಯನ್ನು ಮೋಶೆ ಆರೋನನಿಗೆ ತಿಳಿಸಿದನು. ಇಬ್ಬರು ಸೇರಿ ಈ ಸಲ ಸಂದೇಶವನ್ನು ಇಬ್ರಿಯ ನಾಯಕರಿಗೆ ತೆಗೆದುಕೊಂಡು ಹೋದರು. ದೇವರು ಕೊಟ್ಟ ಮಹತ್ಕಾರ್ಯದ ಗುರುತುಗಳನ್ನು ಇಬ್ರಿಯ ನಾಯಕರಿಗೆ ಮುಂದೆ ಪ್ರದರ್ಶಿಸಿದಾಗ, ದೇವರು ಅವರನ್ನು ಬಿಡಿಸುವನೆಂದು ನಂಬಿದರು. ಇಬ್ಬರು ಸಾಷ್ಟಾಂಗವೆರಗಿ ಆರಾಧಿಸಿದರು.



ಧೈರ್ಯದಿಂದ, ಮೋಶೆ ಮತ್ತು ಆರೋನರು ಫರೋಹನ ಮುಂದೆ ನಿಂತು “ನನ್ನ ಜನರನ್ನು ಹೋಗಲು ಬಿಡು” ಎಂದು ಹೇಳಿದರು.



“ನಾನು ಇಸ್ರಾಯೆಲ್ಯರನ್ನು ಹೊಗಗೋಡಿಸುವುದಿಲ್ಲ”
ಎಂದು ಉತ್ತರ ಕೊಟ್ಟು ದೇವರಿಗೆ ವಿಧೆಯನಾಗಲಿಲ್ಲ.



ದೇವರು ಫರೋಹನ ಮನಸ್ಸನ್ನು ಬದಲಾಯಿಸಲು
ಅನೇಕ ಮಹತ್ಕಾರ್ಯಗಳನ್ನು ಮಾಡಬೇಕಾಯಿತು.



# ರಾಜಕುಮಾರನು ಕುರಿ ಕಾಯುವವನಾದನು

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

ವಿಮೋಚನಕಾಂಡ 2-5

**“ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು.”**
**ಕೀರ್ತನೆ 119:130**

# ಮುಕ್ತಾಯ

10

60

ಅದ್ಭುತನಾದ ದೇವರು ನಮ್ಮನ್ನು ಉಂಟು ಮಾಡಿರುವನೆಂದು ಮತ್ತು ನಾವು ಆತನನ್ನು ಕಂಡುಕೊಳ್ಳಬೇಕೆಂದು ದೇವರು ಇಷ್ಟಪಡುತ್ತಾನೆಂದು ಈ ಬೈಬಲ್ ಕಥೆಯು ತಿಳಿಸುತ್ತದೆ.

ನಾವು ಕೆಟ್ಟ ಕೆಲಸಗಳನ್ನು ಮಾಡಿರುವದು ದೇವರಿಗೆ ತಿಳಿದಿರುತ್ತದೆ. ಈ ಕೆಟ್ಟ ಕೆಲಸಗಳನ್ನು ದೇವರು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ. ಆದರೆ ನಮ್ಮ ಪಾಪದ ಶಿಕ್ಷೆಯನ್ನು ತನ್ನ ಮೇಲೆ ಹೊತ್ತುಕೊಂಡು ಶಿಲುಬೆಯ ಮೇಲೆ ಪ್ರಾಣ ಕೊಡಲು ದೇವರು ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟನು. ಯೇಸುಕ್ರಿಸ್ತನು ಸತ್ತವರೊಳಗಿಂದ ತಿರುಗಿ ಎದ್ದು ಬಂದು ಪರಲೋಕಕ್ಕೆ ಏರಿಹೋಗಿದ್ದಾನೆ. ನಿನ್ನ ಪಾಪದ ಶಿಕ್ಷೆಯನ್ನು ಯೇಸುಕ್ರಿಸ್ತನು ತೀರಿಸಿದ್ದಾನೆ. ಆತನು ನಿನ್ನ ಪಾಪಗಳನ್ನು ಕ್ಷಮಿಸುತ್ತಾನೆ. ಆದರೆ ನಿನ್ನ ಪಾಪಗಳನ್ನು ಕ್ಷಮಿಸಬೇಕೆಂದು ನೀನು ಆತನಿಗೆ ಕೇಳಿಕೊಳ್ಳಬೇಕು. ಆತನು ಖಂಡಿತವಾಗಿ ನಿನ್ನ ಪಾಪಗಳನ್ನು ಕ್ಷಮಿಸುವನು ಮತ್ತು ಈಗಲೇ ನಿನ್ನ ಹೃದಯದೊಳಗೆ ಬಂದು ವಾಸಿಸಬಲ್ಲನು! ನೀನು ಆತನೊಂದಿಗೆ ಯಾವಾಗಲೂ ಜೀವಿಸುವಿ.

ನೀನು ಈ ಸತ್ಯವನ್ನು ನಂಬುವದಾದರೆ, ದೇವರಿಗೆ ಈ ಮಾತುಗಳನ್ನು ಹೇಳು:
ಕರ್ತನಾದ ಯೇಸುವೇ, ನೀನು ದೇವರು ಆಗಿರುವಿ ಎಂದು ಮತ್ತು ನನ್ನ ಪಾಪಕ್ಕಾಗಿ ನಿನ್ನ ಪ್ರಾಣವನ್ನು ಕೊಡಲು ಮನುಷ್ಯನಾಗಿ ಬಂದಿರುವಿ ಎಂದು ನಂಬುತ್ತೇನೆ. ಈಗ ನೀನು ಸತ್ತವರೊಳಗಿಂದ ಎದ್ದು ಬಂದು ಯಾವಾಗಲೂ ಜೀವಿಸುವವನಾಗಿರುವಿ, ನನ್ನ ಪಾಪಗಳನ್ನು ದಯವಿಟ್ಟು ಕ್ಷಮಿಸಿ ನನ್ನ ಹೃದಯದೊಳಗೆ ಬಂದು ವಾಸಿಸು. ಹೀಗೆ ಹೊಸ ಜೀವವನ್ನು ಪಡೆದುಕೊಂಡು ಒಂದು ದಿನ ನಾನು ನಿನ್ನ ಬಳಿಗೆ ಬಂದು ನಿನ್ನೊಂದಿಗೆ ಯಾವಾಗಲೂ ಇರುವೆನು. ನಿನಗೆ ವಿಧೇಯನಾಗುವದಕ್ಕೆ ಮತ್ತು ನಿನ್ನ ಮಗನಾಗಿ ಜೀವಿಸುವದಕ್ಕೆ ನನಗೆ ಸಹಾಯಮಾಡು. ಆಮೆನ್.

ನೀನು ಪ್ರತಿದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು!
ಯೋಹಾನ 3:16